7 ಎಕರೆಯಲ್ಲಿ ತಲೆಯೆತ್ತಲಿದೆ ಹೈಟೆಕ್ ಆಸ್ಪತ್ರೆ....

# ಕಲಬುರಗಿ: ಜಯದೇವ ಹೃದ್ರೋಗ ಆಸ್ಪತ್ರೆ ಕಟ್ಟಡ ನಿರ್ಮಾಣಕ್ಕೆ ಫೆಬ್ರುವರಿಯಲ್ಲಿ ಅಡಿಗಲ್ಲು

ಸಂ.ಕ. ಸಮಾಚಾರ ಕಲಬುರಗಿ

ನಗರದಲ್ಲಿ ಜಯದೇವ ಹೃದ್ರೋಗ ಸಂಸ್ಥೆಯ ಹೈಟೆಕ್ ಆಸ್ಪತ್ರೆನಿರ್ಮಾಣಕ್ಕೆಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದ್ದು, ಬರುವ ಫೆಬ್ರುವರಿಯಲ್ಲಿ ಕಟ್ಟಡ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಲುನಿರ್ಧರಿಸಲಾಗಿದೆ. ಬೆಂಗಳೂರಿನ ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಹಾಗೂ ಖ್ಯಾತ ಹೃದ್ರೋಗ ತಜ್ಞ ಡಾ. ಸಿ.ಎನ್. ಮಂಜುನಾಥ್ ಮಂಗಳವಾರ ವಿವಿಧ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ಸಮಗ್ರ ಮಾಹಿತಿ ನೀಡಿದರು.

ಮುಖ್ಯ ರಸ್ತೆಯಲ್ಲಿರುವ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಯ (ಡಿಎಚ್‌ಒ) ಆವರಣದಲ್ಲಿನ ಏಳು ಎಕರೆ ಹತ್ತು ಗುಂಟೆ ಜಾಗೆಯಲ್ಲಿ ಆಸ್ಪತ್ರೆ ಕಟ್ಟಡ ನಿರ್ಮಿಸಲಾಗುತ್ತದೆ. ಜಿಲ್ಲಾಡಳಿತ ಈಗಾಗಲೇ ಎಲ್ಲ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಸಂಸ್ಥೆಗೆ ಭೂಮಿ ಹಸ್ತಾಂತರ ಮಾಡಿದೆ.

ಇದು 300 ಹಾಸಿಗೆಗಳ ಸಾಮರ್ಥ್ಯದ ವಿಶ್ವದರ್ಜೆಯ ಆಸ್ಪತ್ರೆಯಾಗಲಿದ್ದು, ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ)ಯ 150 ಕೋಟಿ ರೂ. ಅನುದಾನ ನೀಡಲಿದೆ. ಮೂರು ವರ್ಷಗಳಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದರು.

ಈ ಆಸ್ಪತ್ರೆ ಒಟ್ಟು ಮೂರು ಮಹಡಿ (ಜಿ+3) ಹೊಂದಿರಲಿದ್ದು, ನಾಲ್ಕು ಆಪರೇಷನ್ ಥೇಟರ್‌ಗಳು, 125 ಹಾಸಿಗೆಗಳ ಸಾಮರ್ಥ್ಯದ ತೀವ್ರ ನಿಗಾಘಟಕ(ಐಸಿಯು)ಇರಲಿವೆ. ಈ ಕಟ್ಟಡ ಮುಗಿಯುತ್ತಲೇ ಈಗ ಜಿಮ್ಸ್‌ನಲ್ಲಿರುವ ಜಯದೇವ ಆಸ್ಪತ್ರೆಯನ್ನು ಅಲ್ಲಿಗೆ ಸ್ಥಳಾಂತರಿಸಲಾಗುತ್ತದೆ ಎಂದು ಅವರು ತಿಳಿಸಿದರು. ಶಾಸಕ ದತ್ತಾತ್ರೇಯ ಪಾಟೀಲ ರೇವೂರ ಮಾತನಾಡಿ 150 ಕೋಟಿ ರೂ. ವೆಚ್ಚದಲ್ಲಿ ಆಸ್ಪತ್ರೆಯ ನೂತನ ಕಟ್ಟಡ ನಿರ್ಮಾಣಕ್ಕೆ ರಾಜ್ಯ ಸರ್ಕಾರ ಅನುಮೋದನೆ ನೀಡಿದ್ದು, ಬರುವ ಫೆಬ್ರವರಿಯಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಂದ ಶಂಕುಸ್ಥಾಪನೆ ನೆರವೇರಿಸಲಾಗುವುದು. ಕಲಬುರಗಿಯಲ್ಲಿ ವಿಮಾನ ನಿಲ್ದಾಣ ಆರಂಭಗೊಂಡಿರುವುದರಿಂದ ತುರ್ತು ಸಂದರ್ಭದಲ್ಲಿ ತಜ್ಞ ವೈದ್ಯರು ಬೆಂಗಳೂರಿನಿಂದ ಕಲಬುರಗಿಗೆ ಬಂದು ಚಿಕಿತ್ಸೆ ನೀಡಲು ಅನುಕೂಲವಾದಂತಾಗಿದೆ ಎಂದರು.

ಕಲಬುರಗಿಯ ಜಯದೇ ಹೃದ್ರೋಗ ಸಂಸ್ಥೆಯ ನಿರ್ದೇಶ ಡಾ. ಬಾಬುರಾವ ಹುಡಗೀಕರ ಕಾರ್ಡಿಯೋಲಾಜಿ ಮುಖ್ಯ ಡಾ. ವೀರೇಶ ಪಾಟೀ ಹೆಬ್ಬಾಳ, ಸಂಸ್ಥೆಯ ಮು ಆಡಳಿತಾಧಿಕಾರಿ ಚಿಕ್ಕತಿಮ್ಮಯ ಸಾರ್ವಜನಿಕ ಸಂಪರ್ಕಾಧಿಕಾ ಬಿ.ಟಿ. ಸಂತೋಷ ಇದ್ದರು.



ಕಲಬುರಗಿಯಲ್ಲಿ ಮಂಗಳವಾರ ಜಯದೇವ ಹೃದ್ರೋಗ ಸಂಸ್ಥೆಯ ಆಸ್ಪತ್ರೆಯ ನೂತನ ಕಟ್ಟಡ ನಿರ್ಮಾಣ ಸ್ಥಳವನ್ನು ಸಂಸ್ಥೆಯ ನಿರ್ದೇಶಕ ಡಾ. ಸಿ.ಎನ್. ಮಂಜುನಾಥ ಪರಿಶೀಲಿಸಿದರು.



ಕಲಬುರಗಿಯ ಉದ್ದೇಶಿತ ಜಯದೇವ ಹೃದ್ರೋಗ ಆಸ್ಪತ್ರೆಯ ಕಟ್ಟಡದ ನೀಲನಕ್ಷೆ

## 3 ಕಡೆ ನಿತ್ಯ 1400 ಹೊರರೋಗಿಗಳ ತಪಾಸಣೆ

ಬೆಂಗಳೂರಿನ ಜಯದೇವ ಆಸ್ಪತ್ರೆಯಲ್ಲಿ 700, ಮೈಸೂರಿನ ಆಸ್ಪತ್ರೆಯಲ್ಲಿ 400 ಹಾಗೂ ಕಲಬುರಗಿಯಲ್ಲಿ 300 ಸೇರಿದಂತೆ ನಿತ್ಯ ಜಯದೇವ ಆಸ್ಪತ್ರೆಯ ಮೂರು ಸಂಸ್ಥೆಗಳಲ್ಲಿ 1400ರಿಂದ 1500 ಹೊರ ರೋಗಿಗಳನ್ನು ಆಸ್ಪತ್ರೆಗೆ ಬಂದ ಒಂದು ಗಂಟೆಯಲ್ಲಿಯೆ ತಪಾಸಣೆ ಮಾಡಲಾಗುತ್ತಿದೆ. ಬೆಂಗಳೂರಿನ ಆಸ್ಪತ್ರೆಯಲ್ಲಿ ರೋಗಿಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಆಸ್ಪತ್ರೆಯ ಆವರಣದಲ್ಲಿಯೆ ಹೆಚ್ಚುವರಿಯಾಗಿ 300 ಹಾಸಿಗೆಯುಳ್ಳ ಆಸ್ಪತ್ರೆ ತೆರೆಯಲು ಇನ್ಫೋಸಿಸ್ ಪ್ರತಿಷ್ಠಾನ ಮುಂದೆ ಬಂದಿದ್ದು, ಈಗಾಗಲೆ ಕಟ್ಟಡ ಕಾಮಗಾರಿ ಆರಂಭಿಸಲಾಗಿದೆ ಎಂದು ಡಾ. ಮಂಜುನಾಥ ಹೇಳಿದರು.

## ಎರಡು ಲಕ್ಷ ಜನರಿಗೆ ಚಿಕಿತ್ಸೆ

ನಗರದ ಜಿಮ್ಸ್ ಆಸ್ಪತ್ರೆ ಕಟ್ಟಡದಲ್ಲಿ 2016ರ ಏಪ್ರಿಲ್ 23ರಂದು ಕಾರ್ಯಾರಂಭಮಾಡಿದಜಯದೇವಹೃದ್ರೋಗಆಸ್ಪತ್ರೆಯಲ್ಲಿಈವರೆಗೂ ಅಂದರೆ ಅಕ್ಟೋಬರ್ 2019ರವರೆಗೆ 1,99,690 ಹೊರರೋಗಿಗಳಿಗೆ ಚಿಕಿತ್ಸೆ ನೀಡಲಾಗಿದೆ. 16,351 ಒಳರೋಗಿಗಳು ದಾಖಲಾಗಿದ್ದಾರೆ. 135 ಹಾಸಿಗೆಗಳ ಸಾಮರ್ಥ್ಯವಿದ್ದು, ದಿನವೊಂದಕ್ಕೆ ಸರಾಸರಿ 125ರಿಂದ 140 ಒಳರೋಗಿಗಳಿಗೆ ಚಿಕಿತ್ಸೆ ನೀಡುವ ವ್ಯವಸ್ಥೆ ಮಾಡಲಾಗಿದೆ ಎಂದು ಡಾ. ಸಿ.ಎನ್. ಮಂಜುನಾಥ ತಿಳಿಸಿದರು. 9122 ರೋಗಿಗಳಿಗೆ ಆ್ಯಂ-ಜಿಯೊಗ್ರಾಂ, 3,855 ರೋಗಿಗಳಿಗೆ ಆ್ಯಂಜಿಯೊಪ್ಲಾಸ್ಟಿ ಮಾಡಲಾಗಿದ್ದು 112 ಜನರಿಗೆ ಶಾಶ್ವತ ಪೇಸ್ ಮೇಕರ್ ಅಳವಡಿಸಲಾಗಿದೆ. 411 ಓಪನ್ ಹಾರ್ಟ್ ಸರ್ಜರಿಗಳನ್ನು ಮಾಡಲಾಗಿದೆ. ಇನ್ನೂ ಹಲವರಿಗೆ ವಾಲ್ವ್ ರಿಪ್ಲೇಸ್‌ಮೆಂಟ್ ಮಾಡಲಾಗಿದೆ. ಈ ಮೂಲಕ ರಿಯಾಯಿತಿ ದರದಲ್ಲಿ ಗುಣಮಟ್ಟದ ಚಿಕಿತ್ಸೆ ನೀಡಲಾಗುತ್ತಿದೆ. ಇಲ್ಲಿ ಒಟ್ಟು ಎಂಟು ಹೃದ್ರೋಗ ತಜ್ಞರು ಸೇವೆ ಸಲ್ಲಿಸುತ್ತಿದ್ದು, ಇನ್ನೂ ಅನೇಕ ವೈದ್ಯರು, ಸರ್ಜನಗಳು ಇದ್ದಾರೆ, ವೈದ್ಯರ ಕೊರತೆಯಿಲ್ಲ. ಪ್ರತಿದಿನವೂ 300ರಿಂದ 400 ಜನರು ಬರುತ್ತಿದ್ದಾರೆ. ಸದ್ಯ ಇಲ್ಲಿ ಒಂದೇ ಕ್ಯಾಥ್‌ಲ್ಯಾಬ್ ಇದ್ದು, ಇನ್ನೆರಡು ತಿಂಗಳಲ್ಲಿ ಮತ್ತು ಕ್ಯಾಥ್‌ಲ್ಯಾಬ್ ಆರಂಭಿಸಲಾಗುವುದು ಎಂದರು.

ನಮ್ಮ ಚೆನ್ನಣ್ಣ ಸಂಸ್ಮರಣ

10 ವರ್ಷದಿಂದ ಸಿಗದ ಸೌಲಭ್ಯಗಳು